# ರಂಗನಾಯಕಿಯ ಕಥೆ



**ಕನ್ನಡ ವೃತ್ತಿ ರಂಗಭೂಮಿಯಲ್ಲಿ ಲಲಿತಮ್ಮ ಅವರದು ಚಿರಪರಿಚಿತ ಹೆಸರು. ನಾಡಿನ ಪ್ರತಿಷ್ಠಿತ ಕಂಪನಿಗಳೊಂದಿಗೆ ಕೆಲಸ ಮಾಡಿ, ಹಲವು ಪಾತ್ರಗಳಿಗೆ ಜೀವ ತುಂಬಿದ ಹಿರಿಮೆ ಅವರದು. ಸಿನಿಮಾಗಳಲ್ಲೂ ನಟಿಸಿರುವ ಈ ಹಿರಿಯ ಕಲಾವಿದೆ 2023ರ 'ಎಸ್.ಪಿ. ವರದರಾಜು ಪ್ರಶಸ್ತಿ' ಸಂದ ಸಂದರ್ಭದಲ್ಲಿ, 'ಸುಧಾ'ದೊಂದಿಗೆ ತಮ್ಮ ನೆನಪಿನ ಬುತ್ತಿ ಹಂಚಿಕೊಂಡಿದ್ದಾರೆ.**

■ **ಮಂಜುಶ್ರೀ ಎಂ. ಕಡಕೋಳ**

‘ಆಗ ಸ್ಟೇಜ್ ಮೇಲೆ ನಾವು ನಗ್ತಾ ಇದ್ದರೆ ನಮ್ಮೊಂದಿಗೆ ಪ್ರೇಕ್ಷಕರೂ ನಗ್ತಾ ಇದ್ರು. ನಾವು ಅತ್ತರೆ, ಅವ್ರೂ ಅಳ್ತಾ ಇದ್ರು. ಸೂಳೆ ಪಾತ್ರ ಮಾಡಿದ್ರೆ ಛೀ, ಥೂ ಅಂತ ಬೈತಾ ಇದ್ರು. ಇದು ಪ್ರೇಕ್ಷಕರು ಕಲಾವಿದರ ಬಗ್ಗೆ ಅಂದು ತೋರುತ್ತಿದ್ದ ಪ್ರೀತಿ’ ಎನ್ನುತ್ತಾ ವೃತ್ತಿರಂಗದ ಹಳೆಯ ದಿನಗಳನ್ನು ಮೆಲುಕು ಹಾಕುತ್ತಾ ಲಲಿತಮ್ಮ ಭಾವುಕರಾದರು.

ಲಲಿತಮ್ಮ ಡಿ. ತಮ್ಮ ಜೀವನದ 60 ವರ್ಷಕ್ಕೂ ಹೆಚ್ಚು ಕಾಲವನ್ನು ರಂಗಭೂಮಿಯಲ್ಲಿ ಕಳೆದಿರುವವರು. ಎಂಟು ವರ್ಷದವರಿರುವಾಗಲೇ ಬಣ್ಣದ ನಂಟಿಗೆ ಬಂದವರು.

ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಹೊಸಕಟ್ಟೆ ಗ್ರಾಮದವರಾದ ಲಲಿತಮ್ಮ, ತಂದೆ ಜ್ಯೋತೆಪ್ಪ ಅವರಿಂದಾಗಿ ರಂಗದ ಒಡನಾಟಕ್ಕೆ ಬಂದರು. ರೈತರಾಗಿದ್ದ ಜ್ಯೋತೆಪ್ಪ ಅವರಿಗೆ ವೃತ್ತಿನಾಟಕಗಳೆಂದರೆ ಅಚ್ಚುಮೆಚ್ಚು. ಗ್ರಾಮದಲ್ಲಿ ಯಾವುದೇ ವೃತ್ತಿ ಕಂಪನಿ ಬರಲಿ, ನಾಟಕ ಶುರುವಾಗುವ ಮುನ್ನವೇ ಮಕ್ಕಳ ಜೊತೆ ಹಾಜರಾಗುತ್ತಿದ್ದರು. ‘ರಾಮಾಯಣ’, ‘ಸತ್ಯಹರಿಶ್ಚಂದ್ರ’ ನಾಟಕ ನೋಡುವಾಗಲೆಲ್ಲಾ ತಮ್ಮ ಮಕ್ಕಳೂ ರಂಗದ ಮೇಲೆ ಬರಬೇಕೆಂಬ ಆಸೆ ಅವರಲ್ಲಿ ಮೂಡುತ್ತಿತ್ತು. ಪಕ್ಕದ ಗ್ರಾಮದಲ್ಲಿ ಗುಬ್ಬಿಯ ಚಿಕ್ಕ ಮುದ್ದುವೀರಾಚಾರ್ಯ ಅವರ ಕಂಪನಿ ಮೊಕ್ಕಾಂ ಮಾಡಿದ್ದಾಗ ಜ್ಯೋತೆಪ್ಪ ತಮ್ಮ ಇಬ್ಬರು ಹೆಣ್ಣುಮಕ್ಕಳನ್ನು ಹಾರ್ಮೋನಿಯಂ ಮಾಸ್ತರ್ ಬಳಿ ಸಂಗೀತ ಕಲಿಯಲು ಕಳಿಸುತ್ತಿದ್ದರು. ಸಂಗೀತದೊಂದಿಗೆ ನೃತ್ಯಕ್ಕೂ ಹೆಜ್ಜೆ ಹಾಕತೊಡಗಿದ ಮಕ್ಕಳು ಅಕ್ಕಪಕ್ಕದ ಗ್ರಾಮಗಳಲ್ಲೂ ಮನೆಮಾತಾದಾಗ ಅವರಿಗೆ ಹೇಳಲಾಗದ ಸಂತಸ.

ತಾಯಿ ತೀರಿಕೊಂಡ ಬಳಿಕ ಮುದ್ದುವೀರಾಚಾರ್ಯ ಅವರ ಕಂಪನಿಯಲ್ಲಿ ತಂದೆ ಮತ್ತು ಸಹೋದರರೊಂದಿಗೆ ನೆಲೆ ಕಂಡುಕೊಂಡ ಲಲಿತಮ್ಮ, ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ಬಾಲಕಲಾವಿದೆಯಾಗಿ ಪಾತ್ರ ಮಾಡುತ್ತಿದ್ದರು.



ಪುರುಷ ಪಾತ್ರದಲ್ಲಿ ಡಿ. ಲಲಿತಮ್ಮ